# ಕರ್ನಾಟಕ ಲೋಕಾಯುಕ್ತ

**ಕಂಪ್ಲೇಟ್/ಉಪಲೋಕ್/ಬಿಡಿ/1692/2021**
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ,
ಡಾ. ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 31-01-2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀ ಶೇಖ್ ಮಹಮದ್ ರಫಿ, ಅಧೀಕ್ಷಕರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಅಧೀಕ್ಷಕ ಅಭಿಯಂತರರ ಕಚೇರಿ, ಶಿವಮೊಗ್ಗ ವೃತ್ತ,** - ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

=====

1. ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ, ಶಿವಮೊಗ್ಗ, ಶಿವಮೊಗ್ಗ ಜಿಲ್ಲೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ, ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸಲ್ಲಿಸಿದ ವರದಿಯಲ್ಲಿ ಎದುರುದಾರರಾದ **ಶ್ರೀ ಶೇಖ್ ಮಹಮದ್ ರಫಿ, ಅಧೀಕ್ಷಕರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಅಧೀಕ್ಷಕ ಅಭಿಯಂತರರ ಕಚೇರಿ, ಶಿವಮೊಗ್ಗ ವೃತ್ತ** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ವೈ.ಪಿ.ಸಿದ್ದನಗೌಡ, ಬಿನ್ ವೈ.ಹೆಚ್.ಪ್ರಕಾಶ್, ಸಿವಿಲ್ ಗುತ್ತಿಗೆದಾರರು, ಇಂದಿರಾ ಬಡಾವಣೆ, 15ನೇ ವಾರ್ಡ್, ಜಗಳೂರು ಟೌನ್, ದಾವಣಗೆರೆ ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ, ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. ದೂರುದಾರರು ತನ್ನ ದೂರಿನಲ್ಲಿ, ತಾನು ದಿನಾಂಕ: 31-10-2019ಕ್ಕೆ ಒಂದು ವರ್ಷದಿಂದ ಕ್ಲಾಸ್-4 ಗುತ್ತಿಗೆದಾರರಾಗಿ ದಾವಣಗೆರೆ ಜಿಲ್ಲೆ ಜಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದು, ಸದರಿಯವರು ಪರವಾನಗಿ ಸಂಬಂಧ ಶಿವಮೊಗ್ಗ ನಗರದಲ್ಲಿರುವ ಪಿಡಬ್ಲ್ಯೂಡಿ ಇಲಾಖೆಯ ಅಧೀಕ್ಷಕ ಇಂಜಿನೀಯರ್ ಕಛೇರಿಗೆ ದಿನಾಂಕ: 23-10-2019 ರಂದು ಭೇಟಿಯಾಗಿದ್ದು, ಆ

ಸಮಯದಲ್ಲಿ ಸದರಿ ಅಧಿಕಾರಿ ಇಲ್ಲದ ಪ್ರಯುಕ್ತ, ಕಛೇರಿ ಮ್ಯಾನೇಜರ್‌ರಾದ (ಎದುರುದಾರರಾದ) ಶ್ರೀ ಶೇಖ್ ಮಹಮದ್ ರಫಿ ಇವರನ್ನು ವಿಚಾರಿಸಿದಾಗ, ಅವರು ದೂರುದಾರರ ಮಾಹಿತಿಯ ದಾಖಲೆಗಳನ್ನು ಪಡೆದುಕೊಂಡು, ಒಂದು ತಿಂಗಳ ಕಾಲಾವಕಾಶ ಬೇಕಾಗುತ್ತದೆಂದು ತಿಳಿಸಿರುತ್ತಾರೆ ಹಾಗೂ ದೂರುದಾರರು ಲೈಸೆನ್ಸ್ ಮಾಡಿಕೊಡಲು ಫೀಜ್ ಎಷ್ಟಾಗುತ್ತದೆ ಎಂದು ಕೇಳಿದಾಗ, ಎದುರುದಾರರು 4000/– ರೂ ಆಗುತ್ತದೆಂದು, ಅದನ್ನು ಅಲ್ಲಿಯೇ ಇದ್ದ ಕೇಸ್ ವರ್ಕರ್ ಮಹಾಲಕ್ಷ್ಮಮ್ಮ ಅವರಿಗೆ 5000/– ರೂ. ಕೊಡುವಂತೆ ಹೇಳಿದ ಮೇರೆಗೆ, ದೂರುದಾರರು 5000/– ರೂ.ಗಳನ್ನು ನೀಡಿರುತ್ತಾರೆ. ನಂತರ, ವಿಧಿ ಇಲ್ಲದೆ 5000/– ರೂ ಹಣವನ್ನು ಎದುರುದಾರವರಿಗೆ ಮುಂಗಡವಾಗಿ ಕೊಟ್ಟ ಕೂಡಲೇ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಜಗಳೂರು ಶಾಖೆ ಮತ್ತು ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಹರಪನಹಳ್ಳಿ ರವರುಗಳಿಗೆ ಸಾಲ್ವೆನ್ಸಿ ಮತ್ತು ರಹಸ್ಯ ವರದಿಯನ್ನು ಸಲ್ಲಿಸುವಂತೆ ಪತ್ರವನ್ನು ತಯಾರಿಸಿ, ಅವರೇ ಅಧೀಕ್ಷಕ ಅಭಿಯಂತರವರ ಪರವಾಗಿ ಸಹಿಯನ್ನು ಮಾಡಿ, ದೂರುದಾರರ ಕೈಗೆ ಕೊಟ್ಟಿರುತ್ತಾರೆ. ನಂತರ ಉಳಿದ 5000/– ರೂ ಹಣವನ್ನು ಒಂದು ವಾರದಲ್ಲಿ ತಂದು ಕೊಡುವಂತೆ ಹೇಳಿರುತ್ತಾರೆ. ಆ ಸಮಯದಲ್ಲಿ ನಡೆದ ಸಂಭಾಷಣೆಯ ಬಗ್ಗೆ ರೆಕಾರ್ಡ್ ಮಾಡಿಕೊಳ್ಳಲು ಆಗಿರುವುದಿಲ್ಲ.

3. ನಂತರ ದಿನಾಂಕ: 28–10–2019 ರಂದು ದೂರುದಾರರು ತನ್ನ ಮೊಬೈಲ್ ನಂಬರ್ 8660693380 ನಿಂದ ಅಧೀಕ್ಷಕ ಅಭಿಯಂತರರ ಕಚೇರಿಯ ಎದುರುದಾರ ರವರ ಮೊಬೈಲ್ ನಂಬರ್ 9902175131 ಗೆ ಕರೆ ಮಾಡಿ, ಅವರ ಕ್ಲಾಸ್–3 ಲೈಸೆನ್ಸ್ ವಿಚಾರ ಏನಾಯಿತು ಎಂದು ಕೇಳಿದಾಗ, ಅವರು ಉಳಿದ ಹಣವನ್ನು ತೆಗೆದುಕೊಂಡು ಬರುವಂತೆ ತಿಳಿಸಿರುತ್ತಾರೆ. ಆಗ ದೂರುದಾರರು ಅವರಿಗೆ ನಮ್ಮ ಹುಡುಗನು ಸಹ ಕ್ಲಾಸ್ 3 ಲೈಸೆನ್ಸ್‌ಗೆ ಅರ್ಜಿ ಸಲ್ಲಿಸಬೇಕಾಗಿದೆ ಆತನಿಗೆ ಎಷ್ಟು ಹೇಳಬೇಕು ಎಂದಿದ್ದಕ್ಕೆ ಅವರು ನೀ ಕೊಡುವುದರ ಮೇಲೆ 3000/– ರೂ ಜಾಸ್ತಿ ಹೇಳಿ, ನನಗೆ ಮೀಟಿಂಗ್ ಇದೆ ಎಂದು ಹೇಳಿ ಪೋನ್ ಕಟ್ ಮಾಡಿದ್ದು, ಸದರಿ ಸಂಭಾಷಣೆಯನ್ನು ದೂರುದಾರರು ತನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ನಂತರ ದಿನಾಂಕ: 29–10–2019 ರಂದು ಪುನ: ಕರೆ ಮಾಡಿ ಲೈಸೆನ್ಸ್ ಆಯ್ತಾ ಎಂದು ಕೇಳಿದ್ದಕ್ಕೆ ಇನ್ನು ಎರಡು ಮೂರು ದಿನ ಲೇಟ್ ಆಗುತ್ತಪ್ಪ ಎಂದು ಹೇಳಿದರು. ಆಗ ದೂರುದಾರರು ಸರ್ ನೋಡಿ ಸ್ವಲ್ಪ ಬೇಗ ಮಾಡಿಕೊಡಿ ಎಂದು ಕೇಳಿದೊಂಡಾಗ, ಅವರು ಉಳಿದ ಹಣವನ್ನು ತೆಗೆದುಕೊಂಡು ಬಂದು ಕೊಡು, ಮಾಡಿಕೊಡುತ್ತೇನೆ ಎಂದು ಹೇಳಿದ್ದನ್ನು ದೂರುದಾರರು ತನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದಿರುವುದರಿಂದ, ಎದುರುದಾರರು ಕೇಳಿದ ಲಂಚದ ಹಣ 5000/– ರೂ.ಗಳನ್ನು ಹೊಂದಿಸಿಕೊಂಡು ಬಂದು, ದೂರನ್ನು ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ, ಶಿವಮೊಗ್ಗ, ಇವರಿಗೆ ದಿನಾಂಕ: 31/10/2019 ರಂದು ನೀಡಿದ್ದು, ಸದರಿ ಮೊ.ಸಂಖ್ಯೆ: 11/2019 ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ಕಲಂ 7(ಎ) ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

4. ದಿನಾಂಕ: 31-10-2019 ರಂದು ತನಿಖಾಧಿಕಾರಿಯವರು ಪಂಚರಾದ ಪರಮೇಶ್ವರಪ್ಪ,ಕೆ ಪಂಚ-1, ಮಹೇಶ್ ಜಿ.ಪಿ. ಪಂಚ-2, ಇವರನ್ನು ಬರಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 5000/- ಗಳನ್ನು (ಡಿನಾಮಿನೇಷನ್ 2000 x 2, 500 x 2) ಹಾಜರುಪಡಿಸಿರುತ್ತಾರೆ ಹಾಗೂ ಎದುರುದಾರರು ಲಂಚದ ಬೇಡಿಕೆ ಇಟ್ಟ ಸಂಬಂಧ ವಾಯ್ಸ್ ರೆಕಾರ್ಡ್ ಇದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ನಂತರ ಪಂಚರು ಲಂಚದ ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿದ್ದು, ಪ್ರತ್ಯೇಕ ಹಾಳೆಯಲ್ಲಿ ದಾಖಲಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿ ಸೂಚನೆಯ ಮೇರೆಗೆ, ಪಂಚ-2 ಮಹೇಶ್ ಜಿ.ಪಿ. ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಿಲೀನ್ ಪೌಡರ್ ಲೇಪಿಸಿದ ಹಣವನ್ನು ಎಣಿಸಿ ದೂರುದಾರರು ಧರಿಸಿದ ಪ್ಯಾಂಟಿನ ಬಲಭಾಗದ ಮುಂಬಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ದೂರುದಾರರಿಗೆ ನಿಗದಿತ ಸೂಚನೆಯನ್ನು ಕೊಟ್ಟು, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದ ನಂತರ ದೂರುದಾರರು ತನ್ನ ಕರ್ಚಿಫ್ ನಿಂದ ಮುಖವನ್ನು ಒರೆಸಿಕೊಳ್ಳುವ ಮೂಲಕ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ ಹಾಗೂ ಇವರ ಜೊತೆ ಪಂಚ-1 ಪರಮೇಶ್ವರಪ್ಪ, ಕೆ ಇವರು ಇದ್ದು, ಘಟನೆಯನ್ನು ಗಮನಿಸಬೇಕೆಂದು ಸೂಚಿಸಿರುತ್ತಾರೆ ಹಾಗೂ ತನಿಖಾಧಿಕಾರಿಯು ದೂರುದಾರರಿಗೆ ಸೂಚನೆ ನೀಡಿ, ತನ್ನ ಬಳಿ ಇರುವ ಮೊಬೈಲ್‌ನ್ನು ಆನ್ ಮಾಡಿಕೊಂಡು ಎದುರುದಾರರನ್ನು ಭೇಟಿ ಮಾಡಬೇಕೆಂದು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಪಂಚರ ಸಮಕ್ಷಮ ಪ್ರಾಯೋಗಿಕ ಪಂಚನಾಮೆ ದಿನಾಂಕ: 31-10-2019ರಂದು ಮಧ್ಯಾಹ್ನ 1.20 ರಿಂದ 3.00 ಗಂಟೆಯವರೆಗೆ ಮಾಡಿರುತ್ತಾರೆ.

5. ಅದೇ ದಿನ, ದಿನಾಂಕ: 31-10-2019ರಂದು ತನಿಖಾಧಿಕಾರಿಯು, ಸಿಬ್ಬಂದಿಯನ್ನು, ದೂರುದಾರರನ್ನು, ಮತ್ತು ಪಂಚರನ್ನು ಕರೆದುಕೊಂಡು ಮ: 3.40 ಕ್ಕೆ ಎದುರುದಾರರ ಕಛೇರಿಯ ಹತ್ತಿರ ಬಂದಿರುತ್ತಾರೆ. ನಂತರ ದೂರುದಾರರು ಮತ್ತು ಪಂಚ-1 ಕೆ.ಪರಮೇಶ್ವರಪ್ಪ ಇವರು ಎದುರುದಾರರ ಕಛೇರಿಗೆ ಬಂದು, ಎದುರುದಾರರನ್ನು ತನ್ನ ಕೆಲಸದ ಬಗ್ಗೆ ವಿಚಾರಿಸಿದಾಗ, ಅವರು ಇನ್ನೂ ಆಗಿಲ್ಲ ಸಾಹೇಬರು ಇದ್ದಾರ ಎಂದು ಕೇಳಿ, ಸಾಹೇಬರು ಇದಾರ ಎಂದು ಕೇಳಿ, ಸಾಹೇಬರು ಇದ್ದರೆ ಇವತ್ತು ಸಾಯಂಕಾಲ 5.30 ಗಂಟೆಗೆ ಬಾ ಎಂದಾಗ, ದೂರುದಾರರು ಆಯಿತ್ತು ಸಾರ್, ಎಟಿಎಂಗೆ ಹೋಗಿದ್ದೆ, ತೆಗೆದುಕೊಳ್ಳಿ ಸಾರ್ ಎಂದಾಗ ಅವರು ಕೆಲಸ ಆಗುವವರೆಗೂ ತೆಗೆದುಕೊಳ್ಳುವುದಿಲ್ಲ, ಕೆಲಸ ಆಗಬೇಕು, ಇಲ್ಲ ಎಂದರೆ ನಮಗೆ ಬೇಜಾರು ಆಗುತ್ತದೆ ಅಂದಾಗ ದೂರುದಾರರು ನಾನು ಯಾವಗಿದ್ದರೂ ಕೊಡೊದು, ಈಗ ಐದು ಕೊಟ್ಟಿದ್ದೇನೆ, ಎಂದು ಕೊಡಲು ಹೋದಾಗ, ಎದುರುದಾರರು ಕಂಪ್ಯೂಟರ್ ಕಡೆಗೆ ತೋರಿಸಿ ಅಲ್ಲಿ ಇಟ್ಟಿರು ಎಂದು ಹೇಳಿದ ಮೇರೆಗೆ ದೂರುದಾರರು ತನ್ನ ಬಳಿ ಇದ್ದ ಪಿನಾಪ್ತಿಲಿನ್ ಪೌಡರ್ ಲೇಪಿತ ಹಣವನ್ನು ಕಂಪ್ಯೂಟರ್ ಕೆಳಗೆ ಇಟ್ಟು ತನಿಖಾಧಿಕಾರಿಗೆ ನಿಗದಿತ ಸೂಚನೆ ಕೊಟ್ಟಿರುತ್ತಾರೆ. ಆಗ ಸಮಯ ಮ: 4.10 ಆಗಿರುತ್ತದೆ.

6. ನಂತರ, ತನಿಖಾಧಿಕಾರಿಯವರು ದೂರುದಾರರ ಸೂಚನೆಯನ್ನು ಅನುಸರಿಸಿ, ಸ್ಥಳಕ್ಕೆ ಬಂದಾಗ, ದೂರುದಾರರು ಎದುರುದಾರರನ್ನು ತೋರಿಸಿರುತ್ತಾರೆ. ನಂತರ ತನಿಖಾಧಿಕಾರಿ ಎದುರುದಾರರನ್ನು ಪರಿಚಯಿಸಿಕೊಂಡು, ಅವರ ವಿರುದ್ಧ ಪ್ರಕರಣ ದಾಖಲಾಗಿರುವುದರ ಬಗ್ಗೆ ತಿಳಿಸಿ, ತನಿಖೆಯನ್ನು ಪ್ರಾರಂಭಿಸಿ, ಎದುರುದಾರರ ಎರಡೂ ಕೈಬೆರಳುಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ, ದ್ರಾವಣದ ಬಣ್ಣ ಬದಲಾವಣೆಯಾಗಿರುವುದಿಲ್ಲ. ನಂತರ, ತನಿಖಾಧಿಕಾರಿಯವರು ಎದುರುದಾರರನ್ನು ಲಂಚದ ಹಣದ ಬಗ್ಗೆ ವಿಚಾರಿಸಿ ಹಾಜರುಪಡಿಸುವಂತೆ ತಿಳಿಸಿದಾಗ, ಅವರು ನಿರಾಕರಿಸಿದರಿಂದ, ತನಿಖಾಧಿಯವರ ಸೂಚನೆ ಮೇರೆಗೆ, ಪಂಚ-1 ರವರು ಕಂಪ್ಯೂಟರ್ ಅಡಿಯಲ್ಲಿದ್ದ ಲಂಚದ ಹಣವನ್ನು ಎತ್ತಿಕೊಂಡು ಪರಿಶೀಲಿಸಿದಾಗ, ಪಂಚರು ಪ್ರಾಯೋಗಿಕ ಪಂಚನಾಮೆಯ ವೇಳೆಯಲ್ಲಿ ಬರೆದ ನೋಟಿನ ಮೌಲ್ಯ ಮತ್ತು ನಂಬರಿಗೆ ತಾಳೆಯಾಗಿರುತ್ತದೆ. ನಂತರ, ತನಿಖಾಧಿಕಾರಿಯವರು ಸದರಿ ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯವರ ಸೂಚನೆ ಮೇರೆಗೆ ಸಿಬ್ಬಂದಿ ಲಂಚದ ಹಣ ಇಟ್ಟಿದ್ದ ಸ್ಥಳವನ್ನು ಹತ್ತಿಯಿಂದ ಒರೆಸಿ, ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ ದ್ರಾವಣ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ.

7. ನಂತರ, ತನಿಖಾಧಿಕಾರಿಯವರು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣಕ್ಕೆ ಸಮಜಾಯಿಷಿಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತನ್ನ ಸಮಜಾಯಿಷಿಯಲ್ಲಿ "ದಿನಾಂಕ: **31-10-2010** ರಂದು ಮದ್ಯಾಹ್ನ ಸುಮಾರು **04-00** ಗಂಟೆ ಸಮಯಕ್ಕೆ ತಾವುಗಳು ನನ್ನ ವಿರುದ್ಧ ದೂರು ಬಂದಿರುವುದರಿಂದ ನನ್ನನ್ನು ವಿಚಾರಣೆಗೊಳಪಡಿಸಿರುತ್ತೀರಿ ಆದರೆ ಶ್ರೀಯುತರಾದ ಶ್ರೀ ಸಿದ್ದನಗೌಡ ಜಗಳೂರು ಇವರು ತಮಗೆ ನೀಡಿರುವ ದೂರಿನ ಮೇರೆಗೆ ನನ್ನನ್ನು ವಿಚಾರಣೆಗೊಳಪಡಿಸಿದಾಗ ನಾನು ನನ್ನ ಅಹವಾಲನ್ನು ಈ ಕೆಳಕಂಡಂತೆ ತಮ್ಮ ಸಮ್ಮುಖಕ್ಕೆ ಸಲ್ಲಿಸಬಯಸುತ್ತೇನೆ. "ನಾನು ಈ ಕಛೇರಿಯಲ್ಲಿ ಸುಮಾರು 02 ವರ್ಷದಿಂದ ಅಧೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ನನ್ನ ಕರ್ತವ್ಯದ ಬಗ್ಗೆ ಈವರೆಗೂ ಸಾರ್ವಜನಿಕರಾಗಲಿ ಅಥವಾ ಕಛೇರಿಯ ಸಿಬ್ಬಂದಿಗಳಾಗಲಿ ಯಾವುದೇ ದೂರುಗಳಿಲ್ಲದ್ದೇ ನಿಷ್ಠೆಯಿಂದ ಸರ್ಕಾರಿ ಕೆಲಸವನ್ನು ನಿರ್ವಹಿಸಿಕೊಂಡು ಬಂದಿರುತ್ತೇನೆ. ಶ್ರೀ ಸಿದ್ದನಗೌಡ ಜಗಳೂರು ಇವರು ಈ ಕಛೇರಿಗೆ ಆಗಮಿಸಿ 3ನೇ ದರ್ಜೆ ಗುತ್ತಿಗೆದಾರರಾಗಿ ನೊಂದಣಿ ಸಲುವಾಗಿ ಈ ಕಛೇರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಶ್ರೀ ಸಿದ್ದನಗೌಡ ಇವರು ನನಗೆ ಯಾವುದೇ ರೀತಿಯಿಂದ ಪರಿಚಿತ ವ್ಯಕ್ತಿ ಆಗಿರುವುದಿಲ್ಲ ಸದರಿಯವರು 3ನೇ ದರ್ಜೆ ಗುತ್ತಿಗೆ ಸಲುವಾಗಿ ನನಗೆ ಪದೇ ಪದೇ ದೂರವಾಣಿ ಮಾಡಿ ದಿನಾಂಕ: **31-10-2019** ರೊಳಗಾಗಿ ನೊಂದಣಿ ಮಾಡಿಕೊಡಿ ಎಂದು ಹಲವಾರು ಬಾರಿ ದೂರವಾಣಿ ಮೂಲಕ ಕೋರಿಕೊಂಡಿರುತ್ತಾರೆ. ಸದರಿಯವರಿಗೆ ಸಂಬಂಧಿಸಿದ ಕೆಲವು ದಾಖಲೆಗಳು ಅಂದರೆ **Solvency Confirmation** ಮತ್ತು **Workdone Confirmation** ಬಂದಿಲ್ಲದೇ ಇರುವುದರಿಂದ ಕಡತವು ಪ್ರಗತಿ ಹಂತದಲ್ಲಿರುತ್ತದೆ. ಮುಂದುವರೆದು ದಿನಾಂಕ: **30-10-2019** ರಂದು ಸುಮಾರು **11-00** ಗಂಟೆಗೆ **Solvency Confirmation** ಮತ್ತು **Workdone Confirmation Courier** ಮುಖಾಂತರ ಬಂದಿರುತ್ತದೆ. ಸದರಿ

**Confirmation** ಬಂದ ನಂತರ ವಿಷಯ ನಿರ್ವಾಹಕರಾದ ಶ್ರೀಮತಿ ಮಹಾಲಕ್ಷ್ಮಿ ಪ್ರ.ದ.ಸ. ಇವರು ಸದರಿಯವರ ಕಡತವನ್ನು ದಿನಾಂಕ: 30-10-2019 ರಂದು ನನ್ನ ಸುಪರ್ದಿಗೆ ನೀಡಿರುತ್ತಾರೆ. ಸದರಿ ಕಡತದಲ್ಲಿ ನನ್ನ ಷರಾವನ್ನು ನಮೂದಿಸಿ 31-10-2019 ರಂದು ಸುಮಾರು 12-30 ಗಂಟೆಗೆ ರಿಜಿಸ್ಟ್ರಾರ್ ಇವರ ಸಮ್ಮುಖಕ್ಕೆ ಮುಂದಿನ ಕ್ರಮಕ್ಕಾಗಿ ಕಳುಹಿಸಿರುತ್ತೇನೆ. ಶ್ರೀ ಸಿದ್ದನಗೌಡ ಇವರು 31-10-2019 ರಂದು ಬೆಳಿಗ್ಗೆ 12-30 ಕ್ಕೆ ಈ ಕಛೇರಿಗೆ ಆಗಮಿಸಿ ಕಡತದ ಬಗ್ಗೆ ವಿಚಾರಿಸಿರುತ್ತಾರೆ. ಅವರು ವಿಚಾರಿಸಿದಾಗ ಅವರ ಸಮ್ಮುಖದಲ್ಲಿಯೇ ಸದರಿಯವರ ಕಡತವನ್ನು ನನ್ನ ಮೇಲಾಧಿಕಾರಿಯವರಿಗೆ ಕಳುಹಿಸಿಕೊಟ್ಟಿರುತ್ತೇನೆ ಸದರಿಯವರಿಗೆ ನಾನು ಯಾವುದೇ ರೀತಿಯ ತೊಂದರೆಯಾಗಲೀ ಹಣದ ಅಮಿಷವಾಗಿ ಒಡ್ಡಿರುವುದಿಲ್ಲ ಸದರಿಯವರೇ ಪದೇ ಪದೇ ಹಣವನ್ನು ಕೊಡುತ್ತೇನೆ ಎಟಿಎಂಗೆ ಹೋಗಿ ಬರುತ್ತೇನೆ ಸಂಜೆ ಒಳಗೆ ಲೈಸೆನ್ಸ್ ನೀಡುವಂತೆ ಹೇಳಿರುತ್ತಾರೆ. ಅವರು ಮಾತಿಗೆ ಸಂಜೆ ಒಳಗೆ ಲೈಸೆನ್ಸ್ ಸಹಿಯಾದರೇ ಅದನ್ನು ತೆಗೆದುಕೊಂಡು ಹೋಗಿ ಎಂದು ತಿಳಿಸಿರುತ್ತೇನೆ". ಶ್ರೀ ಸಿದ್ದನಗೌಡರವರಿಗೆ ನಾನು ಯಾವುದೇ ರೀತಿಯ ಲಂಚವನ್ನು ನೀಡುವಂತೆ ಕೇಳಿರುವುದಿಲ್ಲ ಸದರಿಯವರು ಪುನ: ಈ ಕಛೇರಿಗೆ ಸಂಜೆ ಸುಮಾರು 04-00 ಗಂಟೆ ಸಮಯಕ್ಕೆ ಹಾಜರಾಗಿ ಪುನ: ಲೈಸೆನ್ಸ್ ಆಗಿದೆಯಾ ಎಂದು ಕೇಳಿರುತ್ತಾರೆ. ಅದಕ್ಕೆ ಇದುವರೆಗೂ ಸಹಿಯಾಗಿ ಬಂದಿಲ್ಲ ಸಂಜೆವರೆಗೆ ಕಾಯಿರಿ ಸಹಿಯಾದರೆ ತೆಗೆದುಕೊಂಡು ಹೋಗಿ ಎಂದು ಹೇಳಿರುತ್ತೇನೆ. ಆದರೆ ಸದರಿ ಶ್ರೀ ಸಿದ್ದನಗೌಡ ಇವರು ನನ್ನನ್ನು ಎಸಿಬಿ ಇವರಿಂದ ರೈಡ್ ಮಾಡಿಸುವ ಸಲುವಾಗಿಯೇ ಉದ್ದೇಶಪೂರ್ವಕವಾಗಿ ನನ್ನ ವಿರುದ್ಧ ಪಿತೂರಿ ನಡೆಸಿ ಒತ್ತಾಯಪೂರ್ವಕವಾಗಿ ಹಣವನ್ನು ನಾನು ಕುಳಿತುಕೊಳ್ಳುವ ಸ್ಥಳದಲ್ಲಿ ಅಂದರೆ ಕಂಪ್ಯೂಟರ್ ಹತ್ತಿರ ಇಟ್ಟು ಹೋಗಿರುತ್ತಾರೆ. ಸದರಿ ಹಣಕ್ಕೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಇವರು ನನ್ನನ್ನು ಮಟ್ಟ ಹಾಕುವ ಉದ್ದೇಶದಿಂದ ನನ್ನ ವಿರುದ್ಧ ಪಿತೂರಿ ನಡೆಸಿರುತ್ತಾರೆ. ಎದುರುದಾರರು ನೀಡಿದ ಸಮಜಾಯಿಷಿಕೆ ಬಗ್ಗೆ ತನಿಖಾಧಿಕಾರಿಯವರು ದೂರುದಾರರ ಅಭಿಪ್ರಾಯ ಕೇಳಿದಾಗ, **"ಎದುರುದಾರರು ನನ್ನ ಕ್ಲಾಸ್-3 ಲೈಸೆನ್ಸ್ ಮಾಡಿಸಿಕೊಡಲು ನನ್ನಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುತ್ತಾರೆ"** ಎಂದು ಹೇಳಿರುತ್ತಾರೆ. ನಂತರ ತನಿಖಾಧಿಕಾರಿಯು ಘಟನಾವಳಿಗಳನ್ನು ಚಿತ್ರೀಕರಿಸಿ, ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ನಂತರ ತನಿಖಾಧಿಕಾರಿ ದಿನಾಂಕ: 31-10-2019 ರಂದು ಮ: 4.10 ರಿಂದ ರಾ: 9.00 ರವರೆಗೆ ಎದುರುದಾರರ ಕಛೇರಿಯಲ್ಲಿ ಜಪ್ತಿ ಪಂಚನಾಮೆಯನ್ನು ಜರುಗಿಸಿರುತ್ತಾರೆ.

8. ತನಿಖಾಧಿಕಾರಿಯವರು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಧ್ವನಿಗೆ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಇರುವ ಬಗ್ಗೆ ವರದಿಯನ್ನು ಕೋರಿ ವಿಧಿ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ಇವರಿಗೆ ಸಲ್ಲಿಸಿರುತ್ತಾರೆ.

9. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಫ್ತಲೀನ್ ಅಂಶ ಇರುವುದು ದೃಢಪಟ್ಟಿದೆ.

10. ಎದುರುದಾರರಿಗೆ ದಿ: 18/09/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ತನ್ನ ವಿವರಣೆಯನ್ನು ದಿ: 08/10/2021 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ಎದುರುದಾರರು ತನ್ನ ವಿವರಣೆಯ ಕಂಡಿಕೆ 1 ರಿಂದ 3ರ ಕಂಡಿಕೆಯಲ್ಲಿ ದೂರುದಾರರ ಆರೋಪವನ್ನು ಸಾರಸಗಟಾಗಿ ಅಲ್ಲಗಳೆದು ಅದರಲ್ಲಿ ತಾನು ಯಾವುದೇ ಹಣಕ್ಕೆ ಬೇಡಿಕೆ ಇಟ್ಟಿರುವುದಿಲ್ಲ, ಹಾಗೂ ಕೆಲಸ ವಿಳಂಬ ಮಾಡಿರುವುದಿಲ್ಲ ಮತ್ತು ಆಡಿಯೋ ರೆಕಾರ್ಡಿಂಗ್ ಸಂಭಾಷಣೆ ಆಧಾರ ರಹಿತವಾಗಿರುತ್ತದೆ. ತಾನು ದೂರುದಾರರಿಂದ ಯಾವುದೇ ಲಂಚದ ಹಣವನ್ನು ಪಡೆದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಕಂಡಿಕೆ 4 ರಲ್ಲಿ ಎ.ಸಿ.ಬಿ. ಅಧಿಕಾರಿಗಳು ದಿ: 31/10/2019 ರಂದು ಸಮಜಾಯಿಷಿಕೆಯನ್ನು ಕೇಳಿದ್ದು, ಅದರಂತೆ ಲಿಖಿತ ಹೇಳಿಕೆಯನ್ನು ಬರೆದುಕೊಟ್ಟಿರುತ್ತೇನೆ. ಅದರಲ್ಲಿ ದೂರುದಾರರು ತನ್ನನ್ನು ಎ.ಸಿ.ಬಿ. ರವರಿಂದ ರೈಡ್ ಮಾಡಿಸುವ ದುರುದ್ದೇಶದಿಂದಲೇ ಹಣವನ್ನು ತಾನು ಕುಳಿತುಕೊಳ್ಳುವ ಟೇಬಲ್‌ನ್ನ ಕಂಪ್ಯೂಟರ್ ಹತ್ತಿರ ಇಟ್ಟು ಹೋಗಿರುತ್ತಾರೆಂದು ತಿಳಿಸಿರುತ್ತಾರೆ. ಕಂಡಿಕೆ 5 ರಲ್ಲಿ ಎ.ಸಿ.ಬಿ. ಅಧಿಕಾರಿಗಳು ತನ್ನಿಂದ ಬಲವಂತಾಗಿ ಸಹಿ ಪಡೆದಿರುತ್ತಾರೆ ಹಾಗೂ ತಾನು ಲಂಚದ ಹಣ ಪಡೆದಿರುವ ಬಗ್ಗೆ ಪಂಚ ಸಾಕ್ಷಿಗಳಿಂದ ಬಲವಂತಾಗಿ ಸಹಿ ಪಡೆದಿರುತ್ತಾರೆ. ಕಂಡಿಕೆ 6 ರಲ್ಲಿ ತಾನು 5000/- ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವುದಿಲ್ಲ. ಎ.ಸಿ.ಬಿ. ಅಧಿಕಾರಿಗಳು ಹಣವನ್ನು ವಶಪಡಿಸಿಕೊಂಡಿರುವುದಿಲ್ಲ, ತನ್ನ ಎರಡು ಕೈ ಬೆರಳುಗಳು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ ದ್ರಾವಣ ಬದಲಾವಣೆಯಾಗಿರುವುದಿಲ್ಲ. ದೂರುದಾರರ ಕಡತವನ್ನು ಲಂಚದ ಹಣಕ್ಕಾಗಿ ತಡೆಹಿಡಿದಿರುವುದಿಲ್ಲ ಹಾಗೂ ಸದರಿ ಕಡತವನ್ನು ವಶಕ್ಕೆ ಪಡೆದಿರುವುದಿಲ್ಲ ಇತ್ಯಾದಿ ತನ್ನ ಹೇಳಿಕೆಯಲ್ಲಿ ತಿಳಿಸಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಕೆಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ. ಎದುರುದಾರರನ್ನು ವಿಚಾರಣೆ ಮಾಡದೇ ಇರಲು ಸೂಕ್ತ ಕಾರಣಗಳು ಕಂಡು ಬಂದಿರುವುದಿಲ್ಲ, ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ದುರ್ನಡತೆ ಮೇಲ್ನೂಟಕ್ಕೆ ಕಂಡುಬರುತ್ತದೆ.

11. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

12. ಆದುದರಿಂದ, ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯವಳಿ 1966ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡತೆ) 2021), ನಿಯಮ 3(1) (i) ರಿಂದ (iii)ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ

ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

13. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

21/1/22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು–1
ಕರ್ನಾಟಕ ರಾಜ್ಯ, ಬೆಂಗಳೂರು